

## ಕೊರೊನಾ ನಂತರ ಫ್ಯಾಷನ್

ಜಗತ್ತನ್ನೇ ತಲ್ಲಣಗೊಳಿಸಿದ್ದ ಕೊರೊನಾ ಮಹಾಮಾರಿ ಬಂದು ಹೋದ ನಂತರ ಫ್ಯಾಷನ್ ಜಗತ್ತಿನಲ್ಲಿ ಈಗ ಹೊಸ ಹುರುಪು ಮೂಡಿದೆ. ಅಭೂತಪೂರ್ವ ಬದಲಾವಣೆಗಳೂ ಆಗಿವೆ. ಹೊಸ ಟ್ರೆಂಡ್, ಫ್ಯಾಷನಬಲ್ ಉಡುಪು, ಒಡವೆ ಕೊಳ್ಳುವವರ ಸಂಖ್ಯೆಯೂ ಹಿಂದೆ ಕಡಿಮೆಯಿತ್ತು. ಆದರೆ ಈಗ ಮತ್ತೆ ಫ್ಯಾಷನ್ ಪ್ರಿಯರಲ್ಲಿ ಜೀವಕಳೆ ಬಂದಿದೆ. ಇದಕ್ಕೆ ಕಾರಣ ಲಾಕ್‌ಡೌನ್ ಹಾಗೂ 'ವರ್ಕ್ ಫ್ರಂ ಹೋಮ್' ಗೆ ಫ್ಯಾಷನ್‌ಪ್ರಿಯರು ಹೊಂದಿಕೊಳ್ಳಬೇಕಾಗಿದ್ದ ಅನಿವಾರ್ಯತೆ. ಮೊದಲೆಲ್ಲ ಸಿನಿಮಾ, ಶಾಪಿಂಗ್, ಆಭರಣ ಮಳಿಗೆ, ಕಚೇರಿ, ಕಾಲೇಜು ಎಂದೆಲ್ಲ ಹಲಬಗೆಯ ಉಡುಪು, ಒಡವೆ ತೊಟ್ಟು ಸಂಭ್ರಮಿಸುತ್ತಿದ್ದ 'ಫ್ಯಾಷನ್ ಪ್ರಿಯರು' ಕೊರೊನಾ ಹಾವಳಿಗೆ ಹಿಡಿಶಾಪ ಹಾಕಿದ್ದರು. ಈಗ ಮತ್ತೆ ಬಿಂದಾಸ್ ಶಾಪಿಂಗ್, ಸಖತ್ ಮಿಂಚಿಂಗ್...!

ವರ್ಕ್ ಫ್ರಮ್ ಹೋಂ ಇದ್ದಾಗ ಅನೇಕ ಮಹಿಳೆಯರು (ಪುರುಷರೂ ಹೊರತಾಗಿಲ್ಲ) ಮನೆಯಲ್ಲೇ ಕುಳಿತು ದೇಹದ ಗಾತ್ರ ಹಿಗ್ಗಿಸಿಕೊಂಡಿದ್ದರು. ಉಡುಪು, ಪ್ಯಾಂಟ್ ಎಲ್ಲವನ್ನೂ ಅಡ್ಜಸ್ಟ್ ಮಾಡಿಸಿಕೊಂಡು ಈಗ ಮತ್ತೆ ಕಚೇರಿಗಳಿಗೆ ತೆರಳಬೇಕಾದ ಅನಿವಾರ್ಯತೆ ಬಂದಿದೆ. ಈಗ ಫ್ಯಾಷನ್‌ನತ್ತ ಮತ್ತೆ ಹೊರಳು ನೋಟ ಹರಿಸಲಾರಂಭಿಸಿದ್ದಾರೆ. ಇಂಥವರಿಗಾಗಿ ಈಗ ಲೇಟೆಸ್ಟ್ ಟ್ರೆಂಡ್ ಆಗಿ ಕೆಲ ಉಡುಪುಗಳು ಮಾರುಕಟ್ಟೆಗೆ ಬಂದಿದೆ. ಅವುಗಳಲ್ಲಿ ಸ್ಕಿನ್ ಟೈಟ್ ಲೆಗಿಂಗ್ಸ್, ಸ್ಟ್ರೆಚೆಬಲ್ ಪ್ಯಾಂಟ್ಸ್, ಫ್ರಿಸೈಜ್ ಪ್ಯಾಂಟ್, ಸ್ಲ್ಯಾಕ್ ಹಾಗೂ ಸ್ಕರ್ಟ್‌ಗಳು, ಮಿಕ್ಸ್ ಅಂಡ್ ಮ್ಯಾಚ್ ಉಡುಪುಗಳು, ಅಂದದ ಲೆಗಿಂಗ್‌ಗಳು, ಹಗುರವಾದ ಸೀರೆಗಳು, ಕಾಟನ್ ದುಪಟ್ಟಾಗಳು, ಟ್ರಾನ್ಸಪರೆಂಟ್ ಉಡುಗೆಗಳು ಮುಖ್ಯವಾದವು. ಇವೆಲ್ಲವೂ ಫ್ಯಾಷನಬಲ್ ಆಗಿ ಕಾಣಲು ಸಹಕಾರಿ.

ಫ್ಯಾಷನ್ ಡಿಸೈನರ್, ಉಡುಪು ವರ್ತಕರು ದೇಹ ಬೆಳೆಸಿಕೊಂಡ ಬಳಿಕ ದಂಡಿಸಿದವರಿಗಾಗಿಯೇ ಹಲಬಗೆಯ ಫ್ಯಾಷನ್ ಉಡುಪುಗಳನ್ನು ವಿನ್ಯಾಸಗೊಳಿಸಿ ಮಾರುಕಟ್ಟೆಗೆ ತಂದಿದ್ದಾರೆ. ಕೆಲ ಉಡುಪುಗಳಂತೂ ದೇಹ ವ್ಯತ್ಯಾಸವಾದವರಿಗೆಂದೇ ಆಗಿ ರೂಪಿತವಾದವು. 'ಬ್ಯಾಕ್ ಟು ಆಫೀಸ್' ಸರಣಿಯಲ್ಲಿ ಮಿನಿಸ್ಕರ್ಟ್ ವಿತ್ ಕೋಟ್ ಫ್ಯಾಷನ್ ಜಗತ್ತಿನಲ್ಲಿ ಸದ್ದು ಮಾಡುತ್ತಿದೆ. ಬನಿಯನ್ ಮೆಟೀರಿಯಲ್‌ನ ಸಲ್ವಾರ್, ಲೆಗಿಂಗ್ಸ್ ಮೈಗಂಟುವ ಬಟ್ಟೆಯದಾದರೂ ಸ್ಟ್ರೆಚೆಬಲ್ ಇರುವುದರಿಂದ ಯಾರು ಬೇಕಾದರೂ ಆರಾಮವಾಗಿ ಧರಿಸಬಹುದು. ಇದಕ್ಕೆ ಭಾರತೀಯ ಮತ್ತು ಪಾಶ್ಚಾತ್ಯ ಶೈಲಿಯ ಟಾಪ್‌ಗಳು ಸಖತ್ ಲುಕ್ ಕೊಡುತ್ತದೆ. ಪಲಾಜೊ ಪ್ಯಾಂಟ್, ಲಾಂಗ್ ಸ್ಕರ್ಟ್ ಅನ್ನೇ ಹೋಲುವಂತಹ ಪ್ಯಾಂಟ್‌ಗಳೂ ಟ್ರೆಂಡಿ ಎನಿಸಿವೆ. ಸೀಕ್ವೆನ್ಸ್ ಶೈಲಿಯ ಪ್ಯಾಂಟ್‌ಗಳೂ ಇದೀಗ ಜನಪ್ರಿಯ. ಈ ಶೈಲಿಯ ಪ್ಯಾಂಟ್ ಮೇಲೆ ಯಾವ ಟಾಪ್‌ಗಳಾದರೂ ಚೆನ್ನಾಗಿ ಮ್ಯಾಚಿಂಗ್ ಆಗುತ್ತದೆ.

'ಯುವಕರು ಪೆನ್ಸಿಲ್ ಕಟ್ ಪ್ಯಾಂಟ್‌ಗಳಿಗೆ ಒಲವು ತೋರಿಸುವಂತೆ ಕಾಲೇಜು ಹುಡುಗಿಯರು ಸ್ಲ್ಯಾಕ್‌ಗಳ ಮೇಲೆ ಆಸಕ್ತಿ ತಳೆಯುತ್ತಿದ್ದಾರೆ. ಜೊತೆಗೆ ಸೀಕ್ವೆನ್ಸ್ ಶೈಲಿಯ ಶರ್ಟ್, ಪುಲ್‌ಓವರ್ ಮತ್ತು ಟೀ ಶರ್ಟ್..ಎಲ್ಲವೂ ಸೂಕ್ತವೇ ಎನಿಸಿವೆ' ಎಂದು ಹೇಳುತ್ತಾರೆ ಮಂಗಳೂರಿನ ಫ್ಯಾಷನ್ ಡಿಸೈನರ್ ನಿರುಪಮಾ ಶೆಟ್ಟಿ.

'ಡ್ರೆಸ್, ಆಕ್ಸೆಸರೀಸ್ ಮುಂತಾದವುಗಳಲ್ಲಿ ಮಿಕ್ಸ್ ಅಂಡ್ ಮ್ಯಾಚ್ ಮಾಡಿಕೊಳ್ಳುವ ಪರಿಕಲ್ಪನೆ ಹಿಂದಿನಿಂದಲೂ ಚಾಲ್ತಿಯಲ್ಲಿತ್ತು. ಈಗಲೂ ಅದೇ ಟ್ರೆಂಡ್ ಕೂಡ ಮುಂದುವರಿದಿದೆ. ಉಡುಪು, ಕೃತಕ ಒಡವೆಗಳ ವಿನ್ಯಾಸ, ಬಣ್ಣ ಯಾವುದೇ ಇರಲಿ, ಮಿಕ್ಸ್ ಅಂಡ್ ಮ್ಯಾಚ್ ಮಾಡಿಕೊಂಡರೆ ಸಖತ್ ಲುಕ್ ಕೊಡುತ್ತದೆ' ಎನ್ನುತ್ತಾರೆ ನಿರುಪಮಾ.

ಫ್ಯಾಷನ್ ಮಾಡಲು ವಯಸ್ಸಿನ ಹಂಗಿಲ್ಲ. ಎಳೆಯ ಮಗುವಿನಿಂದ ಹಿಡಿದು ಇಳಿವಯಸ್ಸಿನ ಮಹಿಳೆವರೆಗೆ ಎಲ್ಲರಲ್ಲೂ ಇಂದು ಫ್ಯಾಷನ್ ಪ್ರಜ್ಞೆ ಜೀವಂತವಾಗಿದೆ. ■

## ಎವರ್‌ಗ್ರೀನ್ ಎಥ್ನಿಕ್

ಸಾಂಪ್ರದಾಯಿಕ– ಆಧುನಿಕ ಎರಡೂ ಮನೋಭಾವದ ಮಹಿಳೆಯರಿಗಾಗಿ ಎಥ್ನಿಕ್ ಉಡುಪುಗಳು ಫ್ಯಾಷನ್ ಜಗತ್ತಿನಲ್ಲಿ ಎವರ್‌ಗ್ರೀನ್ ಆಗಿ ಕಾಣಿಸಿಕೊಳ್ಳುತ್ತಿದೆ. ಕೆಲವೊಂದು ಎಥ್ನಿಕ್ ಉಡುಪುಗಳು ಸಾಂಪ್ರದಾಯಿಕತೆಯನ್ನು ಮೀರದೆ ಆಧುನಿಕ ಟ್ರೆಂಡ್‌ನೊಂದಿಗೆ ರಾಜಿ ಮಾಡಿಕೊಳ್ಳದೆ ಇಂದು ಯುವತಿಯರ ಮನಗೆಲ್ಲುತ್ತಿದೆ.

ಎಥ್ನಿಕ್ ಉಡುಗೆಗಳನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಧರಿಸಬಹುದು. ಫ್ರೆಂಡ್‌ಶಿಪ್ ಡೇ, ವ್ಯಾಲಂಟೇನ್ ಡೇ, ಸ್ವಾತಂತ್ರ್ಯ ದಿನ, ಗಣರಾಜ್ಯ ದಿನಗಳಂತಹ ರಾಷ್ಟ್ರೀಯ ಹಬ್ಬಗಳ ಸಂದರ್ಭಗಳಲ್ಲಿ, ಮದುವೆ, ಮುಂಜಿಗಳಂತಹ ಶುಭ ಸಂದರ್ಭಗಳಲ್ಲಿ ಎಥ್ನಿಕ್ ಉಡುಪುಗಳು ಇತರ ಉಡುಗೆಗಳಿಗಿಂತ ವಿಭಿನ್ನವಾಗಿ ಕಾಣುತ್ತವೆ. ಫ್ಯಾಷನ್‌ನಲ್ಲೂ ಮೇಲುಗೈ ಸಾಧಿಸುತ್ತಿವೆ.

ಸೀರೆಗಳಲ್ಲೂ ಎಥ್ನಿಕ್ ಸೀರೆ ಇಂದಿನ ಟ್ರೆಂಡ್. ಫ್ಯಾಷನಬಲ್ ಆಗಿರುವ ಬಹು ವರ್ಣದ ಸೀರೆಗಳು, ಒಂದೇ ಸೀರೆಯಲ್ಲಿ ಹಲವು ಬಣ್ಣಗಳಿಂದ ಕೂಡಿದವು ಇಂದಿನ ಫ್ಯಾಷನ್‌ಗೆ ತಕ್ಕಂತೆ ಧರಿಸಿದರೆ ಸಖತ್ ಲುಕ್ ಕೊಡುತ್ತದೆ. ಎಥ್ನಿಕ್ ಉಡುಪುಗಳಿಗೂ ವಯೋಮಾನದ ಹಂಗಿಲ್ಲ. ಪುಟ್ಟ ಹುಡುಗಿಯಿಂದ ಹಿಡಿದು ಮುದುಕಿಯರವರೆಗೆ ಎಲ್ಲರೂ ಆರಾಮವಾಗಿ ಉಟ್ಟುಕೊಳ್ಳಬಹುದು. ಹೀಗಾಗಿ ಇಂಥ ಉಡುಪುಗಳಿಗೆ ಬೇಡಿಕೆಯೂ ಹೆಚ್ಚುತ್ತಿದೆ.